

ಪಿಕಾಸೊ ಬಿಡಿಸಿದ ಅಪೊಲಿನೇರ್‌ನ ಚಿತ್ರ


ಅಪೊಲಿನೇರ್

ನಿಸಾರ್ ಅಹಮದ್ ಅವರು ಅವನದೊಂದು ಕವನವನ್ನು ಅನುವಾದಿಸಿದ್ದಾರೆ. 'ಲಂಗ' ಎಂಬ ಶೀರ್ಷಿಕೆಯಲ್ಲಿರುವ ಆ ಕವನ ಎಷ್ಟು ಸೊಗಸಾಗಿದೆಯೆಂದು ತಿಳಿಯಬೇಕಾದರೆ ಇಡೀ ಕವನವನ್ನೇ ಓದಬೇಕು.

ಹೇಗೊಪ್ಪುವುದೆ ನಿನಗೆ ಓ! ಮುದ್ದು ಜರ್ಮೇನೆ,
ರಾಣಿ ಸಹ ಆಶಿಸುವ ಸಿಲ್ಕು ಲಂಗ?
ಕೈಯಲ್ಲೆ ಹೆಣೆದಿರುವ ಇನ್ನದರ ಬಿಳಿಯಂಚೊ
ಸೌಂದರ್ಯ ಯೌವನದ ಮಧುರಸಂಗ.

ನೀನು ನಡೆದಾಗೆಲ್ಲ ಲಂಗ ಚಿನ್ನದ ಘಂಟೆ
ಅದರ ನಾಲಗೆ ನಿನ್ನ ಹೂವುಗಾಲು
ಬಡಿಬಡಿದು ಧ್ವನಿಯಿಂದ ಜಾರುತಿರುವಾನಂದ,
ಹಿಗ್ಗುಗಳ ಕಡೆ ಕಣ್ಣ ಹರಿಸದೇನೆ?
ಏದುಸಿರಿನಿಂದದನು ಬಿಗಿದಪ್ಪಿ ಕೈಯಲ್ಲಿ
ನಾನೊಮ್ಮೆ ಬಾರಿಸಲೆ ಜರ್ಮೇನೆ?

ನಿನ್ನ ಶಯ್ಯಾಗೃಹವೊ ಚರ್ಚಿನೊಳಗಿನ ಗಂಟೆ
ಗೋಡೆಗೂಟದ ಮೇಲೆ ಶೂಲಕೇರಿಸಿದಂತೆ
ಲಂಗಗಳ ತೂಗಾಟ, ಅಯ್ಯೊ ಪಾಪ!
ಕುರುಡಾಗಿಸಿದೆ ನನ್ನ ಕಣ್ಣುಗಳನು
ಗಲ್ಲಿಗೇರಿಸಿದವರ ಕ್ರೂರ ರೂಪ...
ಇದನೆಲ್ಲ ನೋಡುತಿದೆ ಗೂಬೆಯಂತಲುಗದೆಯೆ
ಅಲ್ಲಿ ಮಿಣಿ ಮಿಣಿ ಉರಿವ ಸಣ್ಣದೀಪ.

ಡಿ.ವಿ.ಜಿ.ಯವರು ಬರೆದಿರುವಂತೆ, "ಸರ್ರಿಯಲಿಸಂ ಒಂದು ಕಡೆ ದಿನದಿನದ ಇಂದ್ರಿಯಾನುಭವವನ್ನು ಛಿದ್ರಮಾಡುತ್ತದೆ; ಪ್ರಕೃತಿಯ ವ್ಯವಸ್ಥಿತ ರೂಪವನ್ನು ನಾಶಮಾಡುತ್ತದೆ. ಆದರೆ ಇದರ ಕೆಲಸ ನಾಶಮಾಡುವುದು ಮಾತ್ರವಲ್ಲ. ವಿಚಾರಶಕ್ತಿಯಿಂದ ಕುದುರುವ ಮನೋಭಾವವನ್ನು ನಾಶಮಾಡಿದ ನಂತರ ಅದಕ್ಕೆ ಪ್ರತಿಯಾಗಿ ಬೇರೊಂದು ಮನೋಭಾವವನ್ನು ಸೃಷ್ಟಿಸುವುದೇ ಸರ್ರಿಯಲಿಸಂನ ಉದ್ದೇಶ. ಈ ಮನೋಭಾವವು ಅಜ್ಞಾತ ಚಿತ್ತದ ಅಥವಾ ಅರ್ಧಜ್ಞಾತ ಚಿತ್ತದ ಆಧಾರದ ಮೇಲೆ ಕಟ್ಟಿದ್ದು; ಅವಿಚಾರದ ಮೇಲೆ ನಿಂತದ್ದು; ಒಂದಕ್ಕೊಂದು ವಿರೋಧವಾದ, ಅಸಂಬದ್ಧವಾದ ಅಂಶಗಳನ್ನು ಒಟ್ಟುಗೂಡಿಸತಕ್ಕದ್ದು." ಹಾಗೆ ನೋಡಿದರೆ, ಅವ್ಯವಸ್ಥೆಯ ತಿಳಿವೇ ಸರ್ರಿಯಲಿಸ್ಟರ ಸೃಷ್ಟಿಕಾರ್ಯ. ಈ ಸೃಷ್ಟಿಕಾರ್ಯ ಉಕ್ಕಿ ಹರಿದದ್ದು ಸಾಹಿತ್ಯಕ್ಕಿಂತ ಮಿಗಿಲಾಗಿ ಚಿತ್ರಕಲೆಯಲ್ಲಿ.

ಪಿಕಾಸೊ, ಜಾರ್ಜ್ ಬ್ರಾಖ್, ಮ್ಯಾಕ್ಸ್ ಅರ್ನ್‌ಸ್ಟ್, ದ ಚಿರಿಕೊ, ಜೋನ್ ಮಿರೊ, ಜೀನ್ ಆರ್ಪ್, ರೆನೆ ಮಾಗ್ರಿತ್, ಆಂದ್ರೆ ಮಸೋನ್, ಸಾಲ್ವದೋರ್ ಡಾಲಿ ಮೊದಲಾದವರ ಪೇಂಟಿಂಗುಗಳು ಇಂದ್ರಿಯಾನುಭವವನ್ನು ಮೀರಿದ, ನಮ್ಮ ಅಂತರಾಳದಲ್ಲಿರುವ ಸುಪ್ತ ಜಗತ್ತಿನ ಅಪೂರ್ವ ಪ್ರತಿಫಲನಗಳಾಗಿವೆ.

ಮೇಲೆ ಉಲ್ಲೇಖಿಸಿದ ಕಲಾವಿದರಲ್ಲಿ ಸಾಲ್ವದೋರ್ ಡಾಲಿಯ ಪೇಂಟಿಂಗುಗಳನ್ನು ಕಣ್ಣ ಮುಂದೆ ತಂದುಕೊಂಡಾಗಲೆಲ್ಲ ನನಗೆ ಡಿ.ವಿ.ಜಿ.ಯವರ ಪುತ್ರ ಬಿ.ಜಿ.ಎಲ್. ಸ್ವಾಮಿಯವರು ನೆನಪಾಗುತ್ತಾರೆ. ಅವರು ಪ್ಯಾರಿಸಿನಲ್ಲಿ ನಡೆದ ಸರ್ರಿಯಲಿಸ್ಟರ ಎರಡನೆಯ ಅಂತರರಾಷ್ಟ್ರೀಯ ಕಲಾ ಪ್ರದರ್ಶನವನ್ನು ಕಣ್ಣಾರೆ ನೋಡಿದ್ದವರು. 1979ರಲ್ಲಿ ಪತ್ರಿಕೆಯೊಂದಕ್ಕಾಗಿ ನಾನು ನಡೆಸಿದ ಸಂದರ್ಶನದಲ್ಲಿ ಅವರು ಹೇಳಿದ ಕೆಲವು ಮಾತುಗಳಿವು:

"ಸುಮಾರು 1947–48ರಲ್ಲಿ ಎಂದು ಕಾಣುತ್ತೆ. ಪ್ಯಾರಿಸಿನಲ್ಲಿ ಆಗ ಎರಡನೆಯ ಸರ್ರಿಯಲಿಸ್ಟ್ ಎಕ್ಸಿಬಿಷನ್ ನಡೆಯುತ್ತಿತ್ತು. ಬ್ರೆಟನ್, ಡಾಲಿ ಮುಂತಾದವರನ್ನು ಅಲ್ಲಿ ಭೇಟಿಮಾಡಿದೆ. ಆಮೇಲೆ ಜರ್ಮನಿಯ ಕಲೋನ್‌ನಲ್ಲಿ ಡಾಲಿಯ ತಮ್ಮನ ಸ್ಟುಡಿಯೋದಲ್ಲಿ 8–10 ದಿನ ಇದ್ದೆ. ಅವನಿಗೆ ಭಾರತೀಯ ವೇದಾಂತದಲ್ಲಿ ಅಪಾರ ಆಸಕ್ತಿ ಇತ್ತು. ಡಾಲಿಯೂ ಆಗಾಗ ಅಲ್ಲಿಗೆ ಬರುತ್ತಿದ್ದ. ಆತ ನಾರ್ಮಲ್ ವ್ಯಕ್ತಿ ಅಂತ ನನಗೆ ಅನ್ನಿಸೋಲ್ಲ... ಆದರೆ ಡಾಲಿ ಒಬ್ಬ ಅಪರೂಪದ ಕಲಾವಿದ. ಅವನು ತನ್ನ ವರ್ಣಚಿತ್ರಗಳಲ್ಲಿ ತರುವ ಪರ್ಸ್ಪೆಕ್ಟಿವ್, 3–ಡಿಮೆನ್ಷನಲ್ ಎಫೆಕ್ಟ್ ತುಂಬ ಅಸದೃಶವಾದದ್ದು.

ಇನ್ನು ಸರಿಯಲಿಸ್ಟ್ ಎಕ್ಸಿಬಿಷನ್. ಅದೊಂದು ವಿಶಿಷ್ಟ ಅನುಭವ. ಪ್ರದರ್ಶನಶಾಲೆಯ ಬಾಗಿಲಿನ ಎರಡೂ ಬದಿಗಳಲ್ಲಿ ಕೊಳೆತು ದುರ್ವಾಸನೆ ಹೊಡೆಯುತ್ತಿದ್ದ ಕಕ್ಕಸುಗಳಿದ್ದವು. ಪ್ರೇಕ್ಷಕರು ಅದನ್ನು ದಾಟಿಕೊಂಡೇ ಒಳಗೆ ಹೋಗಬೇಕು. ಒಂದು ಬಹು ದೊಡ್ಡ ಗಾಜಿನ ಜಾಡಿ. ಅದರೊಳಗೆ ದನದ ರಕ್ತವನ್ನು ತುಂಬಿದ್ದರು. ಒಂದು ಗಡಿಯಾರವನ್ನು ಜಜ್ಜಿ ಅದರೊಳಗೆ ಹಾಕಿದ್ದರು. ಅದೊಂದು ಡಾಲಿಯ ಕೃತಿ."